ಬೆಂಗಳೂರು ನಗರದ ಕೃಷ್ಣ ರಾಜೇಂದ್ರ ಮಾರುಕಟ್ಟೆ ನಿರ್ಮಾಣದಲ್ಲಿ ಅವ್ಯವಹಾರ

2663 (3266) ಶ್ರೀ ಆರ್. ಅಶೋಕ್. (ಉತ್ತರಹಳ್ಳಿ): ಮಾನ್ಯ ಮುಖ್ಯ ಮಂತ್ರಿಯವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ನಿರ್ಮಾಣದಲ್ಲಿ ಗುತ್ತಿಗೆದಾರರು ಷರತ್ತು ಉಲ್ಲಂಘನೆ ಮಾಡಿರುವುದು ಮತ್ತು ನಿರ್ಮಾಣ ಮಾಡಿದ ಗುತ್ತಿಗೆದಾರರಾದ ಶಾಮರಾಜು ಕಂಪನಿಯನ್ನು ಸರ್ಕಾರ ಕಪ್ಪು ಪಟ್ಟಿಗೆ ಸೇರಿಸಿದೆಯೇ?

ಆ) ಈ ಮಾರುಕಟ್ಟೆ ನಿರ್ಮಾಣಕ್ಕೆ ತಗಲಿದ ವೆಚ್ಚವೆಷ್ಟು?

ಇ) ಕಪ್ಪು ಪಟ್ಟಿಗೆ ಸೇರಿದ ಶಾಮರಾಜು ಕಂಪನಿಗೆ ಮೇಖ್ರಿ ವೃತ್ತದ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಸಹ ನೀಡಿರುವುದು ನಿಜವೇ?

ಈ) ಶಾಮರಾಜು ಕಂಪೆನಿಯನ್ನು ಕಪ್ಪು ಪಟ್ಟಿಗೆ ಸೇರಿಸುವಂತೆ ಆದೇಶಿಸಿದ್ದರೂ ಸಹ ಇದೇ ಕಂಪೆನಿಗೂ ಹೆಚ್ಚಿನ ಮೊತ್ತದ ಕಾಮಗಾರಿಯನ್ನು ನೀಡುರುವುದು ಸರಿಯೇ? ಇದನ್ನು ರದ್ದುಪಡಿಸಲು ಮತ್ತು ಕೆ.ಆರ್. ಮಾರುಕಟ್ಟೆಯ ಅವ್ಯವಹಾರಗಳನ್ನು ತನಿಖಿಮಾಡಲು ಏನು ಕ್ರಮವನ್ನು ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) -ಇಲ್ಲ-

ಆ) ಒಟ್ಟು ರೂ. 34 15. 31 ಲಕ್ಷಗಳು

ಇ) ಮೇಖ್ರಿ ವೃತ್ತದ ಗ್ರೇಡ್ ಸಪರೇಟರ್ ಕಾಮಗಾರಿಯನ್ನು ಮೆ : ಶಾಮರಾಜು ಕಂಪೆನಿಗೆ ನೀಡಲಾಗಿದೆ ಮತ್ತು ಈ ಕಂಪೆನಿಯನ್ನು ಕಪ್ಪು ಪಟ್ಟಿಗೆ ಸೇರಿಸಿರುವುದಿಲ್ಲ.

ಈ) ಕಂಪೆನಿಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕೆಂಬ ವಿಷಯವನ್ನು ಪರಿಶೀಲಿಸಲಾಗುತ್ತಿದೆ. ಶ್ರೀಕೃಷ್ಣರಾಜೇದ್ರ ಮಾರುಕಟ್ಟೆ ಕಾಮಗಾರಿಯ ತಾಂತ್ರಿಕ ಮತ್ತು ಆರ್ಥಿಕ ತನಿಖೆ ನಡೆಸಲು ಒಂದು ತಜ್ಞರ ಸಮಿತಿಯನ್ನುರಚಿಸಲಾಗಿದೆ. ಸಮಿತಿಯ ವರದಿ ಬಂದ ನಂತರ, ಶಿಫಾರಸ್ಸಿನಂತೆ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗಾರಿಕಾ ನಿವೇಶನಗಳ ಹಂಚಿಕೆ

2664 (3267) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಈವರೆಗೆ ಯಾವ ಯಾವ ಬಡಾವಣೆಗಳಲ್ಲಿ ಎಷ್ಟು ಕೈಗಾರಿಕಾ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ;

ಆ) ಈ ಹಂಚಿಕೆದಾರರ ಪೈಕಿ ಎಷ್ಟು ಜನ ಷರತ್ತು ಉಲ್ಲಂಘನೆ ಮಾಡಿರುತ್ತಾರೆ ಮತ್ತು ಅಂತಹವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ;